ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 19/10/20



# ಉಕ ಭಾಗದಲ್ಲಿ ಕರುಣೆ ತೋರದ ಭೀಮಾ, ಕೃಷ್ಣಾ

**ಹುಬ್ಬಳ್ಳಿ:** ಉತ್ತರ ಕರ್ನಾಟಕದ ಜನರನ್ನು ಕಂಗೆಡಿಸಿರುವ ಮಳೆ ತಗ್ಗಿದ್ದರೂ ಮಹಾರಾಷ್ಟ್ರದಿಂದ ಹರಿದು ಬರುತ್ತಿರುವ ಅಪಾರ ಪ್ರಮಾಣದ ನೀರಿನಿಂದ ಭೀಮಾ, ಕೃಷ್ಣಾ, ಕಾಗಿಣಾ ನದಿ ಪ್ರವಾಹ ಮುಂದುವರಿದಿದೆ. ಸಂಕಷ್ಟಕ್ಕೆ ಸಿಲುಕಿರುವವರನ್ನು ಭಾರತೀಯ ಸೇನೆಯಿಂದ ರಕ್ಷಿಸಲಾಗುತ್ತಿದೆ.

ಮಹಾರಾಷ್ಟ್ರದಿಂದ ಸೊನ್ನ ಬ್ಯಾರೇಜ್‌ಗೆ 8 ಲಕ್ಷ ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಅಜಫಲಪುರ, ಜೇವರ್ಗಿ ತಾಲೂಕಿನ ತೀರ ಪ್ರದೇಶದ ಗ್ರಾಮಗಳು ಸಂಪೂರ್ಣ ಜಲಾವೃತಗೊಂಡಿವೆ. ಜೇವರ್ಗಿ ತಾಲೂಕಿನ ಮಂದರವಾಡ, ಕೊಬಾಳ ಗ್ರಾಮಗಳಿಗೆ ಶನಿವಾರ ರಾತ್ರೋರಾತ್ರಿ ಪ್ರವಾಹ ನುಗ್ಗಿದೆ. ಕೊಬಾಳ ಗ್ರಾಮದಲ್ಲಿ ಭಾನುವಾರ ಕ್ಷಣಕ್ಷಣಕ್ಕೂ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಇಡೀ ಗ್ರಾಮವನ್ನೇ ಜನರು ಖಾಲಿ ಮಾಡಿದ್ದಾರೆ. ಮಂದರವಾಡ ಗ್ರಾಮದ ಸುತ್ತಲೂ ನೀರು ಏರುತ್ತಲೇ ಇದೆ. ಹೀಗಾಗಿ ಗ್ರಾಮಸ್ಥರನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಾಂತರಗೊಳಿಸಿದ್ದಾರೆ.

ಅಫಜಲಪುರ ತಾಲೂಕಿನ ಉಡಚಣ ಗ್ರಾಮದಲ್ಲಿಯೋಧರುರಕ್ಷಣಾಕಾರ್ಯಾಚರಣೆ ನಡೆಸಿ ಬೋಟ್‌ಗಳ ಮೂಲಕ ಗ್ರಾಮಸ್ಥರನ್ನು ಕಾಳಜಿ ಕೇಂದ್ರಗಳಿಗೆ ರವಾನಿಸಿದ್ದಾರೆ. ಈಗಾಗಲೇ 57 ಗ್ರಾಮಗಳು ಜಲಾವೃತಗೊಂಡಿದ್ದು, ಭಾನುವಾರದವರೆಗೆ 20,024 ಜನರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗಿದೆ. ಚಿಂಚೋಳಿ ತಾಲೂಕಿನ ಎತ್ತಪೋತ ಜಲಧಾರೆ ವೀಕ್ಷಣೆ ವೇಳೆ ಕಾಲು ಜಾರಿ ನೀರಿನಲ್ಲಿ ಕೊಚ್ಚಿಕೊಂಡು ಹೋದ ಪ್ರವಾಸಿಗನೊಬ್ಬನನ್ನು ಸ್ಥಳೀಯ ಸಂಗಾಪುರ ತಾಂಡಾದ ಯುವಕರು ರಕ್ಷಣೆ ಮಾಡಿದ್ದಾರೆ.

**ನಿಲ್ಲದ ಕೃಷ್ಣಾ ಅಬ್ಬರ:** ನಾರಾಯಣಪುರ ಜಲಾಶಯದಿಂದ 1.34 ಲಕ್ಷ ಕ್ಯೂಸೆಕ್, ಭೀಮಾ ನದಿಯಿಂದ 3.34 ಲಕ್ಷ ಕ್ಯೂಸೆಕ್ ನೀರು ಹರಿಸಿದ್ದರಿಂದ ರಾಯಚೂರು ತಾಲೂಕಿನ ಕೃಷ್ಣಾ ನದಿ ಪಾತ್ರದಲ್ಲಿ ಪ್ರವಾಹ ಭೀತಿ ಹೆಚ್ಚಾಗಿದೆ. ಸನ್ನತಿ ಬ್ಯಾರೇಜ್‌ನಿಂದ 6 ಲಕ್ಷ ಕ್ಯೂಸೆಕ್‌ಗಿಂತ ಅಧಿಕ ನೀರು ಹರಿಸುವ ಸಾಧ್ಯತೆ ಇದೆ ಎಂಬ ಮಾಹಿತಿ ಮೇರೆಗೆ ನದಿ ಪಾತ್ರದಲ್ಲಿ ಜಿಲ್ಲಾಡಳಿತ ಕಟ್ಟೆಚ್ಚರ ವಹಿಸಿದೆ.

ತಾಲೂಕಿನ ಗುರ್ಜಾಪುರ ಸೇರಿ ಅಪಾಯಕರ ಸ್ಥಳಗಳಲ್ಲಿ ಎನ್‌ಡಿಆರ್‌ಎಫ್ ತಂಡದ ಸದಸ್ಯರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಜಿಲ್ಲಾಡಳಿತ ನಿಯೋಜಿಸಿದ ನೋಡಲ್ ಅಧಿಕಾರಿಗಳು ಕೂಡ ನದಿ ಪಾತ್ರದ ಸುಮಾರು ಹತ್ತಾರು ಹಳ್ಳಿಗಳಿಗೆ ತೆರಳಿ ಜಾಗೃತಿ ಮೂಡಿಸಿದ್ದಾರೆ. ತೀರ ಅಪಾಯಕ್ಕೆ ಸಿಲುಕುವ ಹಳ್ಳಿಗಳ ಜನರ ಸ್ಥಳಾಂತರಕ್ಕೆ ಮಾಡಲಾಗುತ್ತಿದೆ. ನದಿ ಪಾತ್ರದ ಜಮೀನುಗಳು ಸಂಪೂರ್ಣ ಜಲಾವೃತಗೊಂಡಿವೆ. ಭತ್ತ ಸಂಪೂರ್ಣ ಹಾಳಾಗಿದ್ದು, ಕಾಳು ಕಟ್ಟುವ ಹಂತಕ್ಕೆ ಬಂದಿದ್ದರಿಂದ ರೈತರು ಸಾಕಷ್ಟು ನಷ್ಟಕ್ಕೆ ತುತ್ತಾಗಿದ್ದಾರೆ.



**ಕಲಬುರಗಿ: ಭೀಮಾ ನದಿ ಪ್ರವಾಹ ನೀರು ನುಗ್ಗಿರುವುರಿಂದ ಜೇವರ್ಗಿ ತಾಲೂಕಿನ ಕೊಬಾಳ ಗ್ರಾಮದಲ್ಲಿ ಬಾಲಕನೊಬ್ಬ ನೀರಲ್ಲೇ ಗ್ರಾಮದೊಳಗೆ ಹೋಗುತ್ತಿರುವುದು.**

## ಉತ್ತರಕರ್ನಾಟಕದಲ್ಲಿ ನಾಳೆಯಿಂದ ಮತ್ತೆ 3 ದಿನ ಮಳೆ ಅಬ್ಬರ

**ಧಾರವಾಡ:** ಉತ್ತರ ಕರ್ನಾಟಕ ಭಾಗದ 13 ಜಿಲ್ಲೆಗಳಲ್ಲಿ ಅ.20ರಿಂದ ಮತ್ತೆ ಮಳೆಯ ಅಬ್ಬರ ಶುರುವಾಗಲಿದ್ದು, ಮೂರು ದಿನಗಳ ಕಾಲ ಮಳೆ ಸುರಿಯುವ ಮುನ್ಸೂಚನೆ ಇದೆ. ಧಾರವಾಡ, ಹಾವೇರಿ, ಬೀದರ್, ಕಲಬುರಗಿ, ಬಾಗಲಕೋಟೆ, ಕೊಪ್ಪಳ, ವಿಜಯಪುರ, ಬೆಳಗಾವಿ, ರಾಯಚೂರ, ಬಳ್ಳಾರಿ, ಗದಗ, ಉತ್ತರ ಕನ್ನಡ, ಯಾದಗಿರಿ ಜಿಲ್ಲೆಯಲ್ಲಿ ಸೋಮವಾರ ಮಳೆಯಾಗುವ ಯಾವುದೇ ಮುನ್ಸೂಚನೆ ಇಲ್ಲ, ಆದರೆ ಅ. 20ರಿಂದ ಮತ್ತೆ ಮಳೆಯಾಗುವ ಮುನ್ಸೂಚನೆ ಇದ್ದು, ಅ.20, 21, 22ರವರೆಗೆ ಮಳೆ ಸುರಿಯುವ ಮುನ್ಸೂಚನೆ ಇದೆ ಎಂದು ಕೃಷಿ ವಿವಿಯ ಕೃಷಿ ಹವಾಮಾನ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ। ಆರ್.ಎಚ್.ಪಾಟೀಲ 'ಉದಯವಾಣಿ'ಗೆ ತಿಳಿಸಿದ್ದಾರೆ.